
ವಿಡಂಬನೆಯಷ್ಟೇ ಸಾಕು, ಅಂಥ ಹಾಸ್ಯಪ್ರಜ್ಞೆಯಿರುವ ವ್ಯಕ್ತಿಯ ನಗುವಿನ ಕಟ್ಟೆ ಒಡೆಯುವುದಕ್ಕೆ. ಮೊನ್ನೆ ನಾನೊಬ್ಬ ಮನುಷ್ಯನನ್ನು ನೋಡಿದೆ. ಅಪಾರ ನಿರಾಸೆಯನ್ನು ಹೊಮ್ಮಿಸುವಂತಿದ್ದ ಅವನು 'ಚಿಂತಕ' ಎಂಬ ರೋದಿನ್ನನ ಪ್ರಸಿದ್ಧ ಶಿಲ್ಪವಿದೆಯಲ್ಲ, ಅದೇ ಭಂಗಿಯಲ್ಲಿ ಕುಳಿತುಕೊಂಡು ಪತ್ರಿಕೆಯೊಂದರಲ್ಲಿ ಮುಳುಗಿಹೋಗಿದ್ದ. ನೀವು ನಂಬಿದರೆ ನಂಬಿ, ಬಿಟ್ಟರೆ ಬಿಡಿ, ನನಗವನು ಕಾಣಿಸುತ್ತಿದ್ದದ್ದು ಒಂದು ವ್ಯಂಗ್ಯಚಿತ್ರದಂತೆಯೇ!




ಈಗ ಒಂದು ಉದಾಹರಣೆಯ ಮೂಲಕ ನಾವು ವ್ಯಂಗ್ಯಚಿತ್ರ ಕಲೆಯ ಒಂದು ಅಂಶದತ್ತ ನಮ್ಮ ಗಮನ ಹರಿಸಬಹುದೇನೊ. ನನ್ನ ವ್ಯಂಗ್ಯಚಿತ್ರರಚನಾ ವೃತ್ತಿಯ ಪ್ರಾರಂಭದ ದಿನಗಳಲ್ಲಿ ನನಗೆ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯ ಸಂಪಾದಕರಾಗಿದ್ದ ಪೊತನ್ ಜೋಸೆಫ್ ಅವರ ಮಾರ್ಗದರ್ಶನ ದೊರೆಯುವಂತಾದದ್ದು ನನ್ನ ಸುದೈವ. ಪೊತನ್ ಜೋಸೆಫ್ ದೃಶ್ಯಮಾಧ್ಯಮದ ವಿಡಂಬನೆಯನ್ನೂ ಒಳಗೊಂಡು ಎಲ್ಲ ಬಗೆಯ ವಿಡಂಬನೆಯನ್ನೂ ಗುರುತಿಸುವ ಸೂಕ್ಷ್ಮಗ್ರಾಹಿಯಾಗಿದ್ದರು. ನಾನೊಂದು ವ್ಯಂಗ್ಯಚಿತ್ರವನ್ನು ರಚಿಸಿ ಅವರ ಕೈಯಲ್ಲಿಟ್ಟ ಸಂದರ್ಭ ನೆನಪಿಗೆ ಬರುತ್ತಿದೆ. ನನ್ನ ವ್ಯಂಗ್ಯಚಿತ್ರದಲ್ಲಿ ನಾನು ಅಂದಿನ ಪಾಕಿಸ್ತಾನದ ಪ್ರಧಾನ ಮಂತ್ರಿ 'ಕಾಶ್ಮೀರ ಸಮಸ್ಯೆ'ಯೆಂಬ ಸತ್ತ ಕುದುರೆಯನ್ನು ಬಡಿಯುತ್ತಿರುವಂತೆ ಚಿತ್ರಿಸಿದ್ದೆ. ಅದನ್ನು ಅವರ ಕೈಯಲ್ಲಿಡುವಾಗ ಅಸಮಾಧಾನದ ಸುಳಿವಿದ್ದ ಅವರ ಮುಖವನ್ನು ಕಂಡು ನನಗೆ ನಡುಕವುಂಟಾಗಿತ್ತು. ಅವರು ಸತ್ತ ಕತ್ತೆಯನ್ನು ಬಡಿಯುತ್ತಿರುವ ವ್ಯಕ್ತಿಯೇ ಸತ್ತ ಕತ್ತೆಗಿಂತ ಹೆಚ್ಚು ಸತ್ತಂತಿದ್ದಾನೆ ಎಂದರು. ವ್ಯಂಗ್ಯಚಿತ್ರದಲ್ಲಿ ನಾನು ಅತ್ಯಂತ ಸ್ವಸ್ಥನಾಗಿರುವ ವ್ಯಕ್ತಿ ಸತ್ತ ಕುದುರೆಯನ್ನು ಬಡಿಯುವಂಥ ಹುಚ್ಚು ಕ್ರಿಯೆಯಲ್ಲಿ ತೊಡಗಿರುವ ಅಸಂಬದ್ಧತೆಯನ್ನು ಚಿತ್ರಿಸಬೇಕಿತ್ತು. ಈ ವೈರುಧ್ಯವನ್ನು ಚಿತ್ರಿಸುವ ಕೌಶಲವಿಲ್ಲದೆ ಹೋದರೆ ಉದ್ದೇಶಿತ ವಿಡಂಬನೆಯೇ ಮಾಯವಾಗುತ್ತದೆ. ಆಗ ಅದು ಪೊತನ್ ಜೋಸೆಫ್ ಅವರ ಮೇಲಾದಂತೆ ನೋಡುಗನ ಮೇಲೂ ಯಾವುದೇ ಪರಿಣಾಮ ಬೀರುವುದಿಲ್ಲ. ನಾನು ಆ ಚಿತ್ರವನ್ನು ಮೂರು ನಾಲ್ಕು ಬಾರಿ ಪುನರ್‌ರಚಿಸಿದ ಮೇಲಷ್ಟೆ ಅದು ಪೊತನ್ ಜೋಸೆಫ್‌ರ ಅನುಮೋದನೆ ಪಡೆಯಿತು.

ವ್ಯಂಗ್ಯಚಿತ್ರ ಕಲೆಗೆ ಅದರದೇ ಭಾಷೆಯಿದೆ, ನುಡಿಗಟ್ಟಿದೆ. ಅದು ಒಬ್ಬ ವ್ಯಂಗ್ಯಚಿತ್ರಕಾರನಿಂದ ಇನ್ನೊಬ್ಬ ವ್ಯಂಗ್ಯಚಿತ್ರಕಾರನಿಗೆ ಬೇರೆಯಾಗುತ್ತದೆ. ಬೇರೆಯಾಗಲೇಬೇಕು. ಯಾಕೆಂದರೆ, ಪ್ರತಿಯೊಬ್ಬ ವ್ಯಂಗ್ಯಚಿತ್ರಕಾರನಿಗೂ ಅವನದೇ ಆದ ಶೈಲಿಯಿರುತ್ತದೆ. ಒಂದೇ ವಿಷಯವನ್ನು ಕುರಿತು ಇಬ್ಬರು ವ್ಯಂಗ್ಯಚಿತ್ರಗಳನ್ನು ರಚಿಸಿದರೆ ಅವುಗಳಲ್ಲಿ ಎರಡು ವಿಭಿನ್ನ ಚಿತ್ರಾತ್ಮಕ ವ್ಯಾಖ್ಯಾನಗಳಿರುತ್ತವೆ. ಇಬ್ಬರು ಕಲಾವಿದರು ಒಬ್ಬನದೇ ವ್ಯಂಗ್ಯಭಾವಚಿತ್ರವನ್ನು (ಕ್ಯಾರಿಕೇಚರ್) ರಚಿಸಿದರೆ ಆ ಒಬ್ಬನದೇ ಎರಡು ವಿಭಿನ್ನ ವ್ಯಂಗ್ಯಭಾವಚಿತ್ರಗಳಾಗುತ್ತವೆ. ರಾಜಕಾರಣಿಯೊಬ್ಬನಿಗೆ ಸಂಬಂಧಿಸಿದಂತೆ ಅಂಥ ವಿಭಿನ್ನ ಕೃತಿಗಳನ್ನು ಸುಲಭವಾಗಿ ವಿವರಿಸಬಹುದು.

ಒಬ್ಬ ರಾಜಕಾರಣಿಯ ದೈಹಿಕ ಚಹರೆ ಕೃತ್ರಿಮದ ಮುಖವಾಡವಾಗಿರಬಹುದು. ಅವನೊಳಗೆ ಹಲವು ಪಾತ್ರಗಳು ಮೇಲುಗೈ ಸಾಧಿಸುವುದಕ್ಕಾಗಿ ತಮ್ಮತಮ್ಮಲ್ಲೇ